# ಧಾರಾವಾಹಿ ಲೇಖನ

# ಶ್ರೀರಾಮಕೃಷ್ಣರ ಅಪ್ರಸಿದ್ಧ ಭಕ್ತರು

ಸ್ವರ್ಣಗೌರಿ

(ಹಿಂದಿನ ಸಂಚಿಕೆಯಿಂದ)

### ಹೀರಾನಂದ ಶೌಕಿರಾಮ ಆಡ್ವಾಣಿ

**ಸ್ಫುರದ್ರೂಪಿ** ನವಯುವಕನೊಬ್ಬ ಭಾರತದ ವಾಯುವ್ಯ ದಿಕ್ಕಿನಲ್ಲಿರುವ ಸಿಂಧೂದೇಶದಿಂದ, ೨೨೦೦ ಮೈಲಿಗಳ ದೂರದಿಂದ, ತನಗೆ ಅತ್ಯಂತ ಆಪ್ತರಾದ ಶ್ರೀರಾಮಕೃಷ್ಣರ ಖಾಯಿಲೆಯ ವಿಷಯ ತಿಳಿದು ಭಾರವಾದ ಹೃದಯ ಹೊತ್ತು ಕಾತರದಿಂದ ಬಂದಿದ್ದಾನೆ. ಸದಾ ದೈವೋನ್ಮತ್ತರಾದ ಇಂತಹವರು ಏಕೆ ದಾರುಣವಾದ ಕ್ಯಾನ್ಸರ್ ರೋಗದಿಂದ ನರಳಬೇಕು ಎಂಬ ಪ್ರಶ್ನೆ ಅವನನ್ನು ಕಾಡುತ್ತಿದೆ. ಎಷ್ಟೇ ಆಲೋಚಿಸಿದರೂ ಅವನಿಗೆ ಉತ್ತರ ದೊರೆಯದೆ, ಶ್ರೀರಾಮಕೃಷ್ಣರನ್ನೇ ನೇರವಾಗಿ, 'ದಯವಿಟ್ಟು, ಭಗವಂತನ ಭಕ್ತರೇಕೆ ನರಳಬೇಕು, ಹೇಳಿ' ಎಂದು ಅವನು ಆರ್ತ ಹೃದಯದಿಂದ ಕೇಳಿದನು. ಈ ಪ್ರಶ್ನೆ ಕೇಳಿ ಮಧುರವಾದ ಮಂದಹಾಸದಿಂದ ಶ್ರೀರಾಮಕೃಷ್ಣರ ವದನ ಬೆಳಗಿತು. ಭಾರವಾದ ಗಂಟಲಿನಿಂದ ಗೊಗ್ಗರು ಧ್ವನಿಯಲ್ಲಿ, 'ನರಳುತ್ತಿರುವುದು ದೇಹ, ನಾನಲ್ಲ' ಎಂದರು. ಮತ್ತೇನೋ ಹೇಳಬೇಕೆಂದು ಇಚ್ಛಿಸುತ್ತಿದ್ದರಾದರೂ, ಆಗುತ್ತಿಲ್ಲ.

ಅದನ್ನು ಅರಿತ ವಚನವೇದದ ಕರ್ತೃ ಮಾಸ್ಟರ್ ಮಹಾಶಯ ಆ ಯುವಕನಿಗೆ ಹೀಗೆ ವಿವರಿಸಿದರು: "ಲೋಕಶಿಕ್ಷಣಕ್ಕಾಗಿ ದೇಹವು ನರಳುತ್ತದೆ... ಇಷ್ಟೊಂದು ದಾರುಣ ನೋವಿನಲ್ಲೂ ಅವರ ಮನಸ್ಸು ಶೇಕಡ ನೂರು ಭಾಗ ಭಗವಂತನಲ್ಲಿ ಲೀನವಾಗಿದೆ." ಆದರೆ ಈ ಉತ್ತರವೂ ಯುವಕನ ಮನಸ್ಸಿಗೆ ಶಾಂತಿ, ಸಮಾಧಾನಗಳನ್ನು ನೀಡಲಿಲ್ಲ. ಕೊನೆಗೆ ಶ್ರೀರಾಮಕೃಷ್ಣರೇ, "ನಾನು ಈಗ ಕೇವಲ ಶರೀರವೆಂಬ ಹೊದಿಕೆಯಿಂದ ಕೂಡಿದ ಅಖಂಡ ಸಚ್ಚಿದಾನಂದನನ್ನು ಮಾತ್ರ ನೋಡುತ್ತಿರುವೆ" ಎಂದು ಕಷ್ಟದಿಂದ ಹೇಳಿದರು. ಇದರಿಂದಲೂ ಅವನಿಗೆ ತೃಪ್ತಿಯಾಗಲಿಲ್ಲ. ಆತನಿಗೆ ಪರಮಹಂಸರನ್ನು ಕಂಡರೆ ಅಪರಿಮಿತ ಪ್ರೀತಿ ಮತ್ತು ಭಕ್ತಿಮಿಶ್ರಿತ ಗೌರವ. ಪ್ರೀತಿ, ಕಾಳಜಿಗಳು ನರಳುವಿಕೆಯನ್ನು ಸಹಿಸವು. ಶರೀರಕ್ಕೆ ಸಂಬಂಧಿಸಿದ ರೋಗ, ಸಾವುಗಳನ್ನು ಎಲ್ಲರೂ ಅನುಭವಿಸಲೇ ಬೇಕು ಎಂಬುದನ್ನೂ ಒಪ್ಪಲಾರದಾಯಿತು ಅವನ ಮನಸ್ಸು. ಆ ನವಯುವಕನೇ ಸಿಂಧೂ ದೇಶದ ವಾಸಿ ಹೀರಾನಂದ ಶೌಕಿರಾಮ ಆಡ್ವಾಣಿ. ಈತ ಇಂಗ್ಲಿಷಿನ 'ಸಿಂಧ್ ಟೈಮ್ಸ್ ' ಹಾಗೂ ಸಿಂಧಿ ಭಾಷೆಯ 'ಸಿಂಧ್ ಸುಧಾರ್' ಪತ್ರಿಕೆಗಳ ಸಂಪಾದಕ.

ಸಿಂಧ್ ಪ್ರಾಂತ್ಯದ ಹೈದರಾಬಾದಿನಲ್ಲಿ ಕುಲೀನ ಮನೆತನದಲ್ಲಿ ೨೩ ನೇ ಮಾರ್ಚ್, ೧೮೬೩ ರಲ್ಲಿ ಇವನು ಹುಟ್ಟಿದ. ತಲೆತಲಾಂತರಗಳಿಂದ ಸಿಂಧ್ ಪ್ರಾಂತ್ಯದ ರಾಜನಿಗೆ ಈ ಮನೆತನದ ವಂಶಸ್ಥರೇ ಮಂತ್ರಿಗಳಾಗಿದ್ದರು. ರೆವಿನ್ಯೂ ಆಫೀಸರ್ ಹಾಗೂ ಮ್ಯಾಜಿಸ್ಟ್ರೇಟ್ ಆಗಿದ್ದ ದಿವಾನ್ ಶೌಕಿರಾಮ ನಂದೀರಾಮರು ಹೀರಾನಂದನ ತಾತ; ಹಿರಿಯಣ್ಣ ದಿವಾನ್ ನವಲ್ ರಾಯ್ ಅಸಾಮಾನ್ಯವಾದ ಶೀಲಬಲ, ತಪಸ್ಸು, ಭಕ್ತಿ ಮುಂತಾದ ಗುಣಗಳಿಗೆ ಪ್ರಸಿದ್ಧರಾಗಿದ್ದರು. ಇವರಿಬ್ಬರೂ ಹೀರಾನಂದನ ಜೀವನವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ತಾತನ ಮರಣದ ನಂತರ ಹೀರಾನಂದನು ೧೭ ನೇ ಜನವರಿ ೧೮೭೮ ರಂದು ಕೇಶವಚಂದ್ರಸೇನನ ಬಳಿಗೆ ಉನ್ನತ ವ್ಯಾಸಂಗಕ್ಕಾಗಿ ಕೊಲ್ಕತಾಗೆ ಬಂದನು. ಒಂದು ವರ್ಷ ಅವರ ಬಳಿ ಕಲಿತ ಮೇಲೆ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿ, ಬಿ.ಎ. ಪದವಿಯಲ್ಲಿ ಮೊದಲನೆ ದರ್ಜೆಯಲ್ಲಿ ತೇರ್ಗಡೆಯಾಗಿ, ತಿಂಗಳಿಗೆ ೨೦ ರೂಪಾಯಿ ವಿದ್ಯಾರ್ಥಿವೇತನ ಗಳಿಸಿದನು. ನಂತರ ತಮ್ಮ ಮೋತಿರಾಮನು ಸಹ ವಿದ್ಯಾಭ್ಯಾಸಕ್ಕಾಗಿ ಕೊಲ್ಕತಾದ ಒಂದು ಶಾಲೆಗೆ ಬಂದು ಸೇರಿಕೊಂಡನು. ೧೮೮೧ ರಲ್ಲಿ ಅವರ ತಂದೆ ತೀರಿಕೊಂಡ ಸುದ್ದಿ ಬಂದಿತು. ಆದರೂ ವ್ಯಾಸಂಗಕ್ಕೆ ಅಡಚಣೆಯಾಗುತ್ತದೆಂದು ಅವರನ್ನು ಊರಿಗೆ ಕಳುಹಿಸಲಿಲ್ಲ. ಕುಟುಂಬದ ಪದ್ಧತಿಯ ಅನುಸಾರ ಹೀರಾನಂದನು ಹನ್ನೆರಡನೇ ವಯಸ್ಸಿನಲ್ಲೇ ವಿವಾಹವಾಗಬೇಕಾಯಿತು.

ಕೇಶವಚಂದ್ರ ಸೇನನ ಮಾರ್ಗದರ್ಶನದಲ್ಲಿ ಹೀರಾನಂದನ ಆಧ್ಯಾತ್ಮಿಕ ಪ್ರವೃತ್ತಿ ಅದೆಷ್ಟು ಗಾಢವಾಗಿತ್ತೆಂದರೆ, ೧೮೮೧ ರ ಬೇಸಿಗೆಯಲ್ಲಿ ಹೀರಾನಂದನು ಕಾವಿ ಬಟ್ಟೆ ತೊಟ್ಟು, ಬರಿಗಾಲಲ್ಲಿ ನಡೆದಾಡುವ ಪ್ರತಿಜ್ಞೆ ಕೈಗೊಂಡನು. ತನ್ನ ಪತ್ರಿಕೆಯಲ್ಲಿ ಕೇಶವನು ಬರೆಯುತ್ತಿದ್ದ ಪರಮಹಂಸರ ಬಗೆಗಿನ ವಿಚಾರಗಳನ್ನು ಹೀರಾನಂದನು ಅತ್ಯಂತ ಆಸಕ್ತಿಯಿಂದ ಒದುತ್ತಿದ್ದನು. ಅವರಿಬ್ಬರ ಪ್ರಥಮ ಸಮಾಗಮವು ಬಹುಶಃ ೧೮೮೨ ರ ಮೇ ತಿಂಗಳಲ್ಲಿ ಆಯಿತು. ಒಬ್ಬ ವ್ಯಕ್ತಿಯನ್ನು ನೋಡಿದ ಕೂಡಲೇ ಆತನ ಆಧ್ಯಾತ್ಮಿಕ ಉನ್ನತಿಯನ್ನು ಗುರುತಿಸಬಲ್ಲ ಶ್ರೀರಾಮಕೃಷ್ಣರು ನಂತರ ಹೀಗೆಂದು ಭಕ್ತರ ಬಳಿ ಹೇಳುತ್ತಿದ್ದರು: "ಕೀರ್ತನೆಗಳನ್ನು ಕೇಳುತ್ತಿರುವಾಗ ಬೃಂದಾವನದಲ್ಲಿ ರಾಖಾಲನು ಕೃಷ್ಣನ ಬಳಿ ಇರುವ ದೃಶ್ಯವನ್ನು ಕಂಡೆನು. ನರೇಂದ್ರ ಬಹಳ ಉನ್ನತ ಮಟ್ಟದ ಸಾಧಕ; ಹೀರಾನಂದ ಕೂಡ; ಅವನದು ಮಗುವಿನಂಥ ಸ್ವಭಾವ; ಎಂತಹ ಮಧುರ ಸ್ವಭಾವ! ನನಗೆ ಆತನನ್ನು ನೋಡಬೇಕು ಎನಿಸುತ್ತಿದೆ". ಪರಮಹಂಸರು ಹೀರಾನಂದನನ್ನು ತಮ್ಮ ಸ್ವಂತದವನಂತೆ ಕಾಣುತ್ತಿದ್ದರು. ಒಮ್ಮೆ ಆತನಿಗೆ ಹೇಳಿದರು: "ನೀವೆಲ್ಲ ನನಗೆ ಸೇರಿದವರು. ನಿಮ್ಮಲ್ಲಿ ಯಾರೂ ನನಗೆ ಅಪರಿಚಿತರೆನಿಸರು". ಯಾರು ಬಾಲ್ಯದಿಂದಲೇ ಪವಿತ್ರಾತ್ಮರೋ, ದೇವರಿಗಾಗಿ ವ್ಯಾಕುಲ ಪಡುವರೋ, ಪ್ರಾಪಂಚಿಕ ವಿಷಯವಸ್ತುಗಳ ಬಗ್ಗೆ ಆಸಕ್ತರಲ್ಲದವರೋ ಅಂತಹವರನ್ನು ಪರಮಹಂಸರು ವಿಶೇಷವಾಗಿ ಪ್ರೀತಿಸುತ್ತಿದ್ದರು. ಹೀರಾನಂದನು ಇಂತಹ ಗುಣಗಳುಳ್ಳ ವ್ಯಕ್ತಿ ಎಂಬುದಕ್ಕೆ ಆತನ ಸಹಪಾಠಿ, ವೃತ್ತಪತ್ರಿಕೆಗಳ ವರದಿಗಾರ ನಾಗೇಂದ್ರ ಗುಪ್ತನ ಈ ಮಾತುಗಳೇ ಸಾಕ್ಷಿ: "ಹೀರಾನಂದನು ಅತಿ ಬುದ್ಧಿವಂತನಲ್ಲ. ಆದರೆ ಶೀಲವಂತ,

ಗುಣವಂತ. ಆತನದು ಬಹಳ ಅಪರೂಪದ ವ್ಯಕ್ತಿತ್ವ. ಎಂತಹ ಶಿಸ್ತು ಮತ್ತು ಆತ್ಮನಿಗ್ರಹ ಆತನದು! ಗಂಟೆಗಟ್ಟಲೆ ದೇವರ ಧ್ಯಾನದಲ್ಲಿ ಕಳೆಯುತ್ತಿದ್ದ. ಮಗುವಿನ ಸರಳತೆ ಇತ್ತು ಅವನ ಮಾತಿನಲ್ಲಿ!" ಜೀವನದಲ್ಲಿ ತನಗೊದಗಿದ ಕಷ್ಟಸಂಕಷ್ಟಗಳನ್ನು ಅವನು ಧೈರ್ಯವಾಗಿ ಎದುರಿಸುತ್ತಿದ್ದ. "ಎಂತಹ ಸಂದಿಗ್ಧ ಸಮಯದಲ್ಲೂ ದೇವರನ್ನು, ಸತ್ಯವನ್ನು, ಅಂತಃಸಾಕ್ಷಿಯನ್ನು, ಆಧರಿಸಿ ನಡೆಯಿರಿ" ಎಂದು ಅವನು ಇತರರಿಗೆ ಹೇಳುತ್ತಿದ್ದನು ಕೂಡ.

ಬ್ರಾಹ್ಮ ಸಮಾಜದ ನಾಯಕ ಪ್ರತಾಪಚಂದ್ರ ಮಜುಮದಾರ್ ಹೀರಾನಂದನನ್ನು ಕುರಿತು ಹೀಗೆಂದು ಬರೆಯುತ್ತಾನೆ: "ಇಂತಹ ಸರಳತೆ, ನಿಷ್ಠೆ ಮತ್ತು ಔದಾರ್ಯಗಳನ್ನು ಕೆಲವೇ ವ್ಯಕ್ತಿಗಳಲ್ಲಿ ನಾನು ಕಂಡಿರುವುದು. ಆತನ ಮೃದುತ್ವದ ಮುಸುಕಿನಡಿಯಲ್ಲಿ ಪವಿತ್ರತೆ ಬೆಳಗುತ್ತಿತ್ತು. ಒಮ್ಮೆಯೂ ಆತನು ಯಾರ ಬಗ್ಗೆಯೂ ಅಗೌರವವಾಗಿ ಮಾತನಾಡಿದ್ದಾಗಲಿ ಅಥವಾ ಕೆಟ್ಟದ್ದಾಗಿ ನಡೆದುಕೊಂಡದ್ದಾಗಲಿ ನಾನು ನೋಡಲೇ ಇಲ್ಲ. ಕಿಂಚಿತ್ತೂ ವಂಚನೆ, ಬೂಟಾಟಿಕೆಗಳಿಲ್ಲದ ಅತ್ಯಂತ ಸರಳ ಯುವಕ ಆತ."

ಪರಮಹಂಸರ ಪ್ರೇಮಪೂರಿತ ವ್ಯಕ್ತಿತ್ವ ಹೀರಾನಂದನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಬೀರಿತ್ತು. ಅವರ ಸಂಪೂರ್ಣ ವ್ಯಕ್ತಿತ್ವ ಹಗಲಿರುಳು ಭಗವಂತನಲ್ಲಿ ಒಂದಾಗಿರುವುದು, ಹೀರಾನಂದನ ಒಳಗಣ್ಣಿಗೆ ಗೋಚರವಾಗದಿರಲಿಲ್ಲ. ದಿನೇ ದಿನೇ ಅವರ ಮೇಲಿನ ಆಕರ್ಷಣೆ ವೃದ್ಧಿಯಾದಂತೆ ದಕ್ಷಿಣೇಶ್ವರಕ್ಕೆ ಹೋಗುವುದು ಕೂಡ ಹೆಚ್ಚುತ್ತಾ ಹೋಯಿತು. ಕೆಲವೊಮ್ಮೆ ಹೀರಾನಂದ ರಾತ್ರಿ ಅಲ್ಲಿಯೇ ತಂಗುತ್ತಿದ್ದ. ಪರಮಹಂಸರ ಅಮೃತಸಮಾನವಾದ ನುಡಿಗಳನ್ನು ಸದಾ ತದೇಕಚಿತ್ತದಿಂದ ಕೇಳುತ್ತ, ಅವರ ತಲೆಗೆ ಎಣ್ಣೆ ಹಚ್ಚುವುದು, ಗಂಗೆಗೆ ಕರೆದೊಯ್ದು ಸ್ನಾನ ಮಾಡಿಸುವುದು, ಗಾಳಿ ಬೀಸುವುದು – ಹೀಗೆ ಅವರಿಗೆ ಸೇವೆ ಮಾಡುವ ಸುವರ್ಣಾವಕಾಶಗಳಿಗಾಗಿ ಅವನು ಕಾಯುತ್ತಿದ್ದನು. ಅವರೊಡನೆ ಹಾಸ್ಯ ಮಾಡುತ್ತಾ, ನಗುತ್ತಾ, ಸದಾ ಅವರ ಸಂಗದಲ್ಲೇ ಕಳೆಯುತ್ತಿದ್ದನು. ಶ್ರೀರಾಮಕೃಷ್ಣರಿಗೂ ಸಹ ಹೀರಾನಂದ ಅಚ್ಚುಮೆಚ್ಚಾಗಿದ್ದನು. ಕೇಶವಸೇನನಿಂದ ಪ್ರೇರಿತನಾಗಿ ಬ್ರಾಹ್ಮ ಸಮಾಜದಿಂದ ಬಂದ ಯುವಕರಲ್ಲೆಲ್ಲಾ ಪರಮಹಂಸರಿಗೆ ಅತ್ಯಂತ ಪ್ರೀತಿಪಾತ್ರನಾದವನೆಂದರೆ ಹೀರಾನಂದನೊಬ್ಬನೇ.

ಬಿ.ಎ. ಪರೀಕ್ಷೆ ತೇರ್ಗಡೆಯಾದ ನಂತರ ಸಂಸಾರದ ಹೊರೆ ಹೆಗಲ ಮೇಲೆ ಬಿದ್ದ ಕಾರಣ, ಹೀರಾನಂದನು ಸಿಂಧೂ ದೇಶಕ್ಕೆ ಹಿಂದಿರುಗಬೇಕಾಯಿತು. ಹಿಂದಿರುಗುವ ಮುನ್ನ ಕೇಶವನ ಅಂತಿಮ ದಿನಗಳು ಹತ್ತಿರವಾದ ಕಾರಣ, ಹೀರಾನಂದ ಮತ್ತು ಅವನ ತಮ್ಮ ಮೋತಿರಾಮ ಕೊನೆಯವರೆಗೂ ಆತನ ಸೇವೆಯಲ್ಲಿ ತೊಡಗಿದರು. ಸಿಂಧೂದೇಶಕ್ಕೆ ಭಾರವಾದ ಹೃದಯದಿಂದ ಹಿಂದಿರುಗಿದ ಹೀರಾನಂದನಿಗೆ ಅನೇಕ ಕಡೆಗಳಿಂದ ಕೆಲಸಕ್ಕೆ ಆಹ್ವಾನ ಬಂದಿತು. ಆದರೆ ಅವನು ಸಂಪಾದಕೀಯ ವೃತ್ತಿಯನ್ನು ಆರಿಸಿಕೊಂಡು ಎರಡು ಪತ್ರಿಕೆಗಳ ಸಂಪಾದಕನಾದನು. ಕುಟುಂಬ ನಿರ್ವಹಣೆ ಮತ್ತು ಈ ಸಂಪಾದಕೀಯ ಕೆಲಸಗಳು ಸಾಲದೆಂಬಂತೆ ಭಕ್ತರ ಸಂಘವೊಂದನ್ನೂ ಪ್ರಾರಂಭಿಸಿದನು. ಪ್ರತಿದಿನವೂ ಪೂಜೆ, ಪ್ರಾರ್ಥನೆ, ಅಧ್ಯಯನ ಮುಂತಾದ ಶೀಲವರ್ಧನೆಯ ಕಾರ್ಯಕ್ರಮಗಳಲ್ಲಿ ಒಂದೆರಡು ಗಂಟೆಗಳ ಕಾಲ ಕಳೆಯುತ್ತಿದ್ದನು. ಮುಂದಿನ ವರ್ಷ ದೀನರ ಸೇವೆಯೆಂದು ಭಕ್ತ ವೈದ್ಯರೊಬ್ಬರ ಬಳಿ ಕಾಂಪೌಂಡರ್, ಸಹಾಯಕ, ದಾದಿಯ ಕಾರ್ಯಗಳನ್ನೆಲ್ಲಾ ಒಬ್ಬನೇ ನಿರ್ವಹಿಸಿದನು. ೧೮೮೬ ರಲ್ಲಿ ಪರಮಹಂಸರ ದಾರುಣ ಖಾಯಿಲೆಯ ಸುದ್ದಿ ತಲುಪಿದ ಕೂಡಲೇ ಹೀರಾನಂದನು ಭಯ ವಿಹ್ವಲನಾದನೆಂಬುದಕ್ಕೆ ಅವನು ಕೊಲ್ಕತಾದ ಸ್ನೇಹಿತರಿಗೆ ಬರೆದ ಈ ಪತ್ರವೇ ಸಾಕ್ಷಿ: "ಶ್ರೀರಾಮಕೃಷ್ಣರ ಖಾಯಿಲೆ ನನ್ನನ್ನು ತುಂಬಾ ವ್ಯಥೆಗೀಡುಮಾಡಿದೆ. ಅವರಿನ್ನೂ ಬದುಕಿರಬೇಕು. ಮುಂದಿನ ಯುವಪೀಳಿಗೆಯನ್ನು ಸನ್ಮಾರ್ಗಕ್ಕೆ ಕರೆದೊಯ್ಯಬೇಕು. ಇಂತಹ ಅದ್ಭುತ ವಿಶಿಷ್ಟ ಜ್ಯೋತಿ ಇಷ್ಟು ಬೇಗ ಆರದಿರಲೆಂದು ಪ್ರಾರ್ಥಿಸುತ್ತಿರುವೆ. ಕೊಲ್ಕತಾಗೆ ಹೋಗಿ ಅವರ ಪಾದಪದ್ಮಗಳನ್ನು ಚುಂಬಿಸುವ ಬಯಕೆ ಉತ್ಕಟವಾಗಿದೆ, ಆದರೆ ಸಂಸಾರದ ಜವಾಬ್ದಾರಿಯು ನನ್ನನ್ನು ಇಲ್ಲಿ ಕಟ್ಟಿಹಾಕಿದೆ..."

ಮುಂದಿನ ಪತ್ರಗಳಲ್ಲಿ ಆತನ ಕಳವಳ, ಕಾತರತೆಗಳು ಹೆಚ್ಚುತ್ತಿರುವಂತೆ ತೋರಿಬರುತ್ತದೆ. ಮುಂದೊಂದು ದಿನ ಕರಾಚಿಯಿಂದ ಕೊಲ್ಕತಾಗೆ, ಅವನು ದೀರ್ಘವಾದ ಪಯಣವನ್ನು ಕೈಗೊಂಡೇ ಬಿಟ್ಟನು. ಪರಮಹಂಸರನ್ನು ಅವನು ಕಂಡು ಭೇಟಿಯಾದ ಪ್ರಸಂಗವನ್ನೇ ನಾವು ಮೊದಲಿಗೆ ನೋಡಿದ್ದು. ಅವರನ್ನು ಕಂಡೊಡನೆ ಪ್ರೀತಿಯಿಂದ ಅವರ ಪಾದಗಳನ್ನು ಚುಂಬಿಸಿದನು. ಸಿಂಧೂದೇಶಕ್ಕೆ ಅವರನ್ನು ಕರೆದೊಯ್ಯಲು ಹೀರಾನಂದ ಬಹಳ ಉತ್ಸುಕನಾಗಿದ್ದ. ಇನ್ನೂ ಎರಡು ದಿನವಿರಬೇಕೆಂದು ಪರಮಹಂಸರು ಒತ್ತಾಯ ಮಾಡಿದರೂ ತುರ್ತಾದ ಕೆಲಸಗಳಿವೆಯೆಂದು ಹಿಂದಿರುಗಿದ.

ಅವನು ಹಿಂದಿರುಗಿದ ಕೆಲವೇ ತಿಂಗಳಲ್ಲಿ ಪರಮಹಂಸರ ಮಹಾಸಮಾಧಿಯ ವಾರ್ತೆ ಮುಟ್ಟಿತು. ಹೀರಾನಂದ ಕೂಡ ನಂತರ ಕೇವಲ ಏಳು ವರ್ಷಗಳೊಳಗೆ ಪ್ರಾಣತ್ಯಾಗ ಮಾಡಿದನು. ವೈದ್ಯಕೀಯ ಶುಶ್ರೂಷೆಯಲ್ಲಿ ಪ್ರಾರಂಭದಿಂದಲೂ ಇದ್ದ ಆಸಕ್ತಿಯ ಪರಿಣಾಮವಾಗಿ, ಬಿಡುವಿನ ವೇಳೆಯಲ್ಲಿ ವೈದ್ಯಕೀಯ ಅಧ್ಯಯನ ಮಾಡಿ ತಾನೇ ವೈದ್ಯನಾದನು. ೧೮೯೨ ರಲ್ಲಿ ಸಿಂಧ್ ಪ್ರದೇಶದ ಹೈದರಾಬಾದಿನಲ್ಲಿ ಕಾಲರಾ ಪಿಡುಗು ತಲೆಯೆತ್ತಿತು. ಆಗ ಹಗಲಿರುಳೂ ಜನರ ಸೇವೆಯಲ್ಲಿ ವೈದ್ಯ, ದಾದಿ ಮತ್ತು ಸೇವಕನಂತೆ ತನ್ನನ್ನು ತಾನು ತೊಡಗಿಸಿಕೊಂಡನು. ಆತನ ಮನಸ್ಸು ಜನರಿಗಾಗಿ ಅದೆಷ್ಟು ಮಿಡಿಯುತ್ತಿತ್ತೆಂದರೆ, ಸಂಪಾದಕನ ವೃತ್ತಿಯನ್ನು ತ್ಯಜಿಸಿ ಮಹಿಳೆಯರಿಗಾಗಿ ಶಿಕ್ಷಣ, ಅಸ್ಪತ್ರೆ ನಿರ್ಮಾಣ, ಹುಡುಗರ ಶಾಲೆಯ ಮುಖ್ಯಸ್ಥ – ಮುಂತಾದ ಅನೇಕ ಸಾಮಾಜಿಕ ಕಾರ್ಯಗಳಿಗಾಗಿ ತನ್ನನ್ನು ತಾನು ಸಮರ್ಪಿಸಿಕೊಂಡನು. ಇಂತಹ ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ ಒಳ್ಳೆಯ ಪತಿ ಹಾಗೂ ತಂದೆ ಎನಿಸಿಕೊಂಡನು; ಮೂರು ಮಕ್ಕಳ ತಂದೆಯಾದರೂ ಅಂತರ್ಯದಲ್ಲಿ ಸಂನ್ಯಾಸಿಯೇ ಆಗಿದ್ದನು. ಅದಲ್ಲದೆ, ಹೀರಾನಂದ ಸದಾ ಪರಮಹಂಸರ ಸಂಗ ಹಾಗೂ ಉಪದೇಶಗಳ ಸ್ಮರಣೆಯ ದೋಣಿಯಲ್ಲಿ ತೇಲುತ್ತಿದ್ದ. ಹೀಗೆ ಅವನ ಜೀವನ ಶ್ರೀರಾಮಕೃಷ್ಣರ ಅಚ್ಚಳಿಯದ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ ಸಂಸಾರಿಗೆ ಭಗವಂತನಲ್ಲಿ ಅನುರಾಗ ಉಂಟಾದರೆ, ಆತ ಈ ಪ್ರಪಂಚಕ್ಕೆ ಅಂಟಿಕೊಳ್ಳಲಾರ ಎಂಬುದಕ್ಕೆ ಶ್ರೇಷ್ಠ ನಿದರ್ಶನ ಹೀರಾನಂದನ ಜೀವನ. *(ಮುಂದುವರಿಯುವುದು)*